ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ.....

ಅಧ್ಯಕ್ಷರು.—ಮಾನ್ಯ ಸಚಿವರ್ ಸಾಬ್‌ರವರು ಉತ್ತರಿಸುವ ಪ್ರಶ್ನೆಗಳನ್ನು ತಡೆಹಿಡಿದಿದ್ದೇನೆ ಎಂದು ನಾನು ಆಗಲೇ ಹೇಳಿದ್ದೇನೆ ನಿಮಗೆ ಉತ್ತರವನ್ನು ನಾನು ಕೊಡಿಸುತ್ತೇನೆ. ಈಗ ತಾವು ಗಳು ದಯವಿಟ್ಟು ಕುಳಿತುಕೊಳ್ಳಿ.

ನಗರಸಭೆ, ಕೆ.ಜಿ.ಎಫ್ ನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಿರುವ ಬಗ್ಗೆ

೫೪(೩೮೫) ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೆ.ಜಿ.ಎಫ್. ನಗರಸಭೆಯನ್ನು ರದ್ದುಪಡಿಸಿದ್ದು ನಿಜವಲ್ಲವೇ ?

ಆ) ಈ ನಗರಸಭೆಯನ್ನು ರದ್ದುಪಡಿಸಿದ್ದರೂ ಸಹ ಉಚ್ಚ ನ್ಯಾಯಲಯದ ತಡೆಯಾಜ್ಞೆಯ ಪ್ರಕಾರ ಮುಂದುವರಿಸಿದ್ದು ನಿಜವಲ್ಲವೇ ?

ಇ) ಈ ನಗರಸಭೆಯ ಅವಧಿ ೩೧-೭-೧೯೮೭ಕ್ಕೆ ಮುಗಿದ್ದರೂ, ಜಿಲ್ಲಾಧಿಕಾರಿಗಳು ಆಡಳಿತ ವಹಿಸಿಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಸರ್ಕಾರವು ಕೋಲಾರ ಜಿಲ್ಲಾಧಿಕಾರಿಗಳನ್ನು ನಗರಸಭೆ, ಕೆ.ಜಿ.ಎಫ್. ನ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶ ಹೊರಡಿಸಿದ್ದಾರೆಯೇ ?

ಉ) ಇಲ್ಲದೇ ಹೋದಲ್ಲಿ ನಗರಸಭೆಯ ಅವಧಿ ಮುಗಿದಿದ್ದರೂ, ಈ ನಗರಸಭೆಯು ಆಡಳಿತವನ್ನು ನಡೆಸುತ್ತಿರಲು ಕಾರಣವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಹೌದು, ಕೆ.ಜಿ.ಎಫ್. ನಗರಸಭೆಯನ್ನು ರದ್ದುಪಡಿಸಲಾಯಿತು.

ಆ) ಈ ನಗರಸಭೆಯನ್ನು ಉಚ್ಚ ನ್ಯಾಯಾಲಯದ ಆದೇಶದಂತೆ ಮುಂದುವರಿಸಲಾಯಿತು.

ಇ) ಕೋಲಾರ ಜಿಲ್ಲಾಧಿಕಾರಿಗಳು ನಗರಸಭೆಯ ಆಡಳಿತವನ್ನು ದಿನಾಂಕ ೧೮-೮-೧೯೮೭ ರಂದು ವಹಿಸಿಕೊಂಡಿದ್ದಾರೆ.

ಈ) ಹೌದು.

ಉ) ಈ ಉತ್ತರದಿಂದ ಉದ್ಭವಿಸುವುದಿಲ್ಲ.

SRI T. S. MANI.—Now that the CMC has been dissolved what action the Government has taken on the serious charges of corruption on the CMC President ?

SRI M. CHANDRASHEKAR.—Separate enquiry is being conducted. Deputy Commissioner has been asked to conduct enquiry. Our Department will also conduct enquiry. If it is found any action to be taken, we will take it up.

ಮೈಸೂರು ನಗರಕ್ಕೆ ಕುಡಿಯುವ ನೀರಿನ ಕೊರತೆಯ ಕುರಿತು.

೬೦ (೧೮೨) ಶ್ರೀಮತಿ ಮುಕ್ತರುನ್ನಿಸಾ ಬೇಗಂ (ನರಸಿಂಹರಾಜ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

೧) ಮೈಸೂರು ನಗರದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

೨) ಹಾಗಿದ್ದಲ್ಲಿ, ಮೈಸೂರು ನಗರಕ್ಕೆ ಸಕಾಲಿಕ ನೀರು ಸರಬರಾಜು ಮಾಡುವ ಉದ್ದೇಶದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

೧) ಕರ್ನಾಟಕ ಗೃಹ ಮಂಡಲಿ, ನಗರಾಭಿವೃದ್ಧಿ ಮಂಡಲಿ ಮತ್ತು ಮೈಸೂರು ನಗರಸಭೆಗಳ ಹೊಸ ಬಡಾವಣೆಗಳ ಕೆಲವು ಭಾಗಗಳಲ್ಲಿ ಮಾತ್ರವೇ ಕುಡಿಯುವ ನೀರಿನ ಅಭಾವ ಇದೆ.

೨) ಕರ್ನಾಟಕ ಗೃಹ ಮಂಡಲಿ, ನಗರಾಭಿವೃದ್ಧಿ ಮಂಡಲಿ ಮತ್ತು ಮೈಸೂರು ನಗರ ಸಭೆ ಪ್ರಾರಂಭಿಸಿರುವ ಹೊಸ ಬಡಾವಣೆಗಳಿಗೆ ಕಾವೇರಿ ನೀರು ಸರಬರಾಜು ವ್ಯವಸ್ಥೆಯಿಂದ ಅಥವಾ ಕೊಳವೆ ಬಾವಿಗಳನ್ನು ತೋಡಿ ವಿತರಣಾ ಕೊಳವೆಗಳನ್ನು ಆಳವಡಿಸುವುದರ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಇವರ ಜೊತೆಗೆ ಯಾವ ಭಾಗಗಳಲ್ಲಿ ತೀವ್ರ ಕುಡಿಯುವ ನೀರಿನ ಅಭಾವ ಕಂಡು ಬಂದಿದೆಯೋ ಅಂತಹ ಭಾಗಗಳಲ್ಲಿ ಬರಗಾಲ ಕಾಮಗಾರಿಗಳಡಿಯಲ್ಲಿ ಕೊಳವೆ ಬಾವಿಗಳನ್ನು ತೋಡಲಾಗಿದೆ. ಮೈಸೂರು ನಗರ ನೀರು ಸರಬರಾಜು ಯೋಜನೆಯ ಎರಡನೆಯ ಮತ್ತು ಮೂರನೆಯ ಹಂತಗಳನ್ನು ಸೇರಿಸಲು ೨೯.೪೨ ಲಕ್ಷ ರೂ ಗಳ ಅಂದಾಜು ಯೋಜನೆ ಪ್ರಗತಿಯಲ್ಲಿದ್ದು, ಇದರಿಂದ ಕೆಲವು ಭಾಗಗಳಿಗೆ ನೀರು ಸರಬರಾಜು ಅಭಿವೃದ್ಧಿಯಾಗುವುದೆಂದು ಊಹಿಸಲಾಗಿದೆ.

ಇದರ ಜೊತೆಗೆ ನಗರಾಭಿವೃದ್ಧಿ ಮಂಡಲಿಯವರ ಕೋರಿಕೆಯಂತೆ, ಯಾದವಗಿರಿ, ಕುವೆಂಪು ನಗರ ಮತ್ತು ಜರ್ಮನ್ ಪ್ರೆಸ್‌ಭಾಗಗಳಲ್ಲಿ ವಿಭಾಗೀಯ ಜಲಸಂಗ ಹಾಗಾತಗಳ ಕಟ್ಟುವ ಕೆಲಸಕ್ಕೆ ಪ್ರಾರಂಭಿಕ ಪ್ರಯತ್ನ ಮಾಡಲಾಗಿದೆ. ಇವರಿಂದಲೂ ಸಹಾ ಹೊಸ ಬಡಾವಣೆಗಳಿಗೆ ಕುಡಿಯುವ ನೀರಿನ ಸರಬರಾಜು ಅಭಿವೃದ್ಧಿಯಾಗುವಂತಾಗುತ್ತದೆ.

ಮೈಸೂರು ನಗರಕ್ಕೆ ವಿತರಣಾ ಕೊಳವೆಗಳ ನವೀಕರಣ ಕಲಸಕ್ಕೆ ೧೯೮೦-೮೧ನೇ ಸಾಲಿನ ದರಗಳಲ್ಲಿ ೬೫೦.೦೦ ಲಕ್ಷ ರೂ. ಗಳ ಅಂದಾಜು ತಯಾರಿಸಿದ್ದು ಈ ಯೋಜನೆಯನ್ನು ಏಳನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ.

SMT. MUKTHARUNNISA.—ಅವರು ಉತ್ತರದಲ್ಲಿ ಏನು ಹೇಳಿದ್ದಾರೆ ಎಂದರೆ, 'There is a scarcity of drinking water in some pockets of new layouts' ಇಲ್ಲಿ ಅವರು ಯಾವ ಪಾಕೆಟ್ಸ್ ಅಂತ ಹೇಳಲಿಲ್ಲ.

when the KRSagr water level is 91.20 compared to previous three years what about water Problem in old lay out ? Have you brought this to the nothing of the concerned ? where is the question of new layout ? My question is, there is acute water scarcity in old Mysore City. Here you have mentioned that water supply is being arrangd by connecting Cauvery system and drilling of borewells. In the last three years, I have only seen the foundation stones laid down but it has not been implemented. Connecting cauvery system is not implemented. But still you have mentioned the same in the second para.

ಅಧ್ಯಕ್ಷರು.—ಈಗ ನೀವು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ಆಮೇಲೆ ತಾವು ಉಪ ಪ್ರಶ್ನೆಯನ್ನು ಕೇಳಬಹುದು.

ಶ್ರೀಮತಿ ಮುಕ್ತರುನ್ನಿಸಾ.—ನೀವು ಆಮೇಲೆ ಅವಕಾಶ ಕೊಟ್ಟರೆ ನನ್ನದೇನೂ ಇಲ್ಲ.

ಶ್ರೀ ಎಂ. ಚಂದ್ರಶೇಖರ್.—ಮೈಸೂರು ನಗರದ ನೀರಿನ ವ್ಯವಸ್ಥೆಯೆಂದರೆ ಹಳೆಯ ಭಾಗಗಳು ಮತ್ತು ಹೊಸ ಪ್ರದೇಶಗಳು ಎರಡೂ ಇಲ್ಲಿರುವುದರಿಂದ ನೀರಿನ ತೊಂದರೆಯೇನೋ ಉಂಟು. ಆದರೆ ಮೈಸೂರು ನಗರ ಪಡೆಯುವ ನೀರಿನ ಪ್ರಮಾಣ ನೋಡಿದಾಗ ನಮ್ಮ ರಾಜ್ಯದಲ್ಲಿ ಸರಾಸರಿ ಹೆಚ್ಚು ನೀರು ಪಡೆಯುವ ನಗರ ಏನಾದರೂ ಇದ್ದರೆ ಅದು ಮೈಸೂರು. ೪೦ ಗ್ಯಾಲನ್ ನೀರು ಒಬ್ಬ ವ್ಯಕ್ತಿಗೆ ಅಲ್ಲಿ ಸಿಗುತ್ತಿದೆ. ಆದರೆ ವಿತರಣೆಯಲ್ಲಿ ಲೋಪದೋಷ ಇದೆ. ಅದಕ್ಕಾಗಿ ಹಳೆಯ ಪ್ರದೇಶಗಳಲ್ಲಿ ೩೦-೪೦ ವರ್ಷಗಳ ಹಿಂದೆ ಹಾಕಿದ್ದ ಕಾಲುವೆಗಳು ಬದಲಾಗಬೇಕು. ಹೊಸ ರಿಸರ್ವಾಯರ್‌ಗಳನ್ನು ಕಟ್ಟಬೇಕು. ಆಗ ವಿತರಣೆ ಚೆನ್ನಾಗಿ ಆಗುತ್ತದೆ. ಅದರ ಜೊತೆಗೆ ಹೊಸ ಬಡಾವಣೆಗಳಿಗೂ ನೀರನ್ನು ಒದಗಿಸಬೇಕಾಗಿದೆ. ಸಧ್ಯದಲ್ಲಿ ಕಾವೇರಿ ಒಂದು ಮತ್ತು ಎರಡನೇ ಹಂತಗಳ ಸಿಸ್ಟಮ್ ಏನಿದೆ ಅವೆರಡನ್ನೂ ಲಿಂಕ್ ಮಾಡುವುದರಿಂದ ಅನೇಕ ಭಾಗಗಳಿಗೆ ನೀರು ಕೊಡಲು

ಸಾಧ್ಯವಾಗುತ್ತದೆ. ಆದೂ ಆಲ್ಲದೆ ಮೈಸೂರು ವಿಶ್ವಸ್ಥ ಮಂಡಲಿ ಮತ್ತು ನಗರಪಾಲಿಕೆಯವರು ಈಗಾಗಲೇ ಸುಮಾರು ೨.೬ ಕೋಟಿಯಷ್ಟು ಅಂದಾಜಿನ ಕೆಲಸಗಳನ್ನು ತೆಗೆದುಕೊಂಡು ಯಾದವಗಿರಿ ಯಲ್ಲಿ. ಕುವೆಂಪು ನಗರದಲ್ಲಿ ಮತ್ತು ಜರ್ಮನ್ ಪ್ರೆಸ್ ಪ್ರದೆ ಶಗಳಲ್ಲಿ ತಲಾ ಒಂದೊಂದು ಜಲಸಂಗ್ರ ಹಾಲಯಗಳನ್ನು ನಿರ್ಮಿಸಲು ಕೆ. ಆರ್. ಪೃತ್ತ ದಿಂದ ಬೇರೆ ಪ್ರದೇಶಕ್ಕೂ. ವಿನೋಬಾ ರಸ್ತೆಯಿಂದ ಜಯನಗರದವರೆಗೂ ಕಾಲುವೆಗಳನ್ನು ಹಾಕುತ್ತಿದ್ದಾರೆ. ಈ ಕೆಲಸ ಪೂರ್ಣವಾದ ಮೇಲೆ ನೀರಿನ ಸರಬರಾಜು ಚೆನ್ನಾಗಿ ಆಗುತ್ತದೆ.

SMT. MUKTHARUNNISA.—They have said ; The Scheme costing Rs. 29.40 lakhs for linking second and third stage water supply scheme to the Mysore City is also under execution. Since how many years the work is under execution ?

When it will be finalised ? When the people will get water ?

SRI M. CHANDRASHEKAR.—The work is going on. It will be done as early as possible. ನಗರಾಭಿವೃದ್ಧಿ ಮಂಡಲಿಯವರ ಕೋರಿಕೆಯಂತೆ ಯಾದವಗಿರಿ, ಕುವೆಂಪು ನಗರ ಮತ್ತು ಜರ್ಮನ್ ಪ್ರೆಸ್ ಭಾಗಗಳಲ್ಲಿ ವಿಭಾಗೀಯ ಜಲಸಂಗ್ರಹಾಗಾರ ಗಳು ಕಟ್ಟುವ ಕೆಲಸಕ್ಕೆ ಪ್ರಾರಂಭಿಕ ಪ್ರಯತ್ನ ಮಾಡಲಾಗಿದೆ. ಇದರಿಂದಾಗಿ ನೀರಿನ ಅನುಕೂಲ ವಾಗುತ್ತದೆ.

ಶ್ರೀಮತಿ. ಮುಕ್ತರುನ್ನೀಸಾ.—ಯಾದವಗಿರಿ, ಜರ್ಮನ್ ಪ್ರೆಸ್ ಏರಿಯಾದಲ್ಲಿ ಟ್ಯಾಂಕ್ ಕನ್‌ಸ್ಟ್ರಕ್ಷ್ ಮಾಡುವುದಕ್ಕೆ ಪ್ರಾರಂಭಿಕ ಪ್ರಯತ್ನ ಮಾಡಿದ್ದಾರೆ. ಶ್ರೀ ಧರ್ಮಸಿಂಗ್‌ರವರು ಇದ್ದಾಗಲೇ ಇದಕ್ಕೆ ಹತ್ತು ಲಕ್ಷ ಸಾಂಕ್ಷನ್ ಆಗಿದೆ. ಯಾವಾಗ ಈ ಪ್ರಶ್ನೆಯನ್ನು ಹಾಕಿದರೂ ಕೂಡ ಇದೇ ಉತ್ತರ ಬರುತ್ತಿದೆ, ಥರ್ಡ್ ಸ್ಟೇಜ್ ಆಗುತ್ತಿದೆ, ಸೆಕೆಂಡ್ ಸ್ಟೇಜ್ ಆಗುತ್ತಿದೆ ನಂತರ ನೀರು ಬಿಗುತ್ತದೆ ಎಂದು ಹೇಳುತ್ತಾರೆ.

(ಮುಂದಲ)

ಅಧ್ಯಕ್ಷರು.—ತಾವು ಭಾಷಣ ಮಾಡುತ್ತಿದ್ದೀರಾ ಇಲ್ಲವೇ ಪ್ರಶ್ನೆ ಕೇಳುತ್ತಿದ್ದೀರಾ ?

ಶ್ರೀಮತಿ ಮುಕ್ತರುನ್ನೀಸಾ.—ನಮಗೆ ನೀರು ಬೇಕು ಉತ್ತರ ಬೇಡ.

ಶ್ರೀ ಕೆ. ಹೆಚ್. ಪಾಟೀಲ್.—ಅವರು ಹೇಳುತ್ತಿದ್ದಾರೆ ನಮಗೆ ಉತ್ತರ ಜೇಡ ಕುಡಿಯು ವುದಕ್ಕೆ ನೀರು ಬೇಕು ಎಂದು. ಮಾನ್ಯ ಧರ್ಮಸಿಂಗ್‌ರವರು ಇದ್ದಾಗ ಪ್ರಾರಂಭ ಮಾಡಿದ ಯೋಜನೆಯಿಂದ ಇಪತ್ತಿನವರೆಗೂ ನೀರು ಸಿಕ್ಕಿಲ್ಲ ಈಗಲಾದರೂ ಎಂದು ನೀರು ಕೊಡುತ್ತೀರಿ ? ಸಾಕಷ್ಟು ನೀರನ್ನು ಕೊಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಧರ್ಮಸಿಂಗ್.—ಮೊದಲೇ ೮೫೦ ಲಕ್ಷ ರೂಪಾಯಿ ಡ್ರೈನೇಜ್ ಸ್ಕೀಮ್‌ಗೆ ಸ್ಯಾಂಕ್ಷನ್ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದರು. ಆ ಡ್ರೈನೇಜ್ ಸ್ಕೀಮ್ ಏನಿದೆ ಅದನ್ನು ಯಾವಾಗ ಕೊಡುತ್ತೀರಾ ಎಂಬುದನ್ನು ನಿರ್ದಿಷ್ಟವಾಗಿ ಹೇಳಬೇಕು ?

ಶ್ರೀ ಎಂ. ಚಂದ್ರಶೇಖರ್.—ಉತ್ತರದಲ್ಲಿ ಕೊಟ್ಟಿದೆ. ಮೈಸೂರು ನಗರಕ್ಕೆ ವಿತರಣಾ ಕೊಳವೆ ಗಳ ನವೀಕರಣ ಕೆಲಸಕ್ಕೆ ೧೯೮೦-೮೧ನೇ ಸಾಲಿನ ದರಗಳಲ್ಲಿ ೮೫೦.೦೦ ಲಕ್ಷ ರೂಪಾಯಿಗಳ ಅಂದಾಜನ್ನು ತಯಾರಿಸಿದ್ದು ಈ ಯೋಜನೆಯನ್ನು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸ ಲಾಗಿದೆ.

ಅಧ್ಯಕ್ಷರು.—ಶಿರ್ಲ, ಶ್ರೀ ಪಂಪಾಪತಿ. ೧೭೪ ಶ್ರೀ ಬಿ.ಹೆಚ್. ಯಂಕನಾಯಕ್ ೧೪೩ ಶ್ರೀ ಬಿ.ಎಸ್. ಯಡಿಯೂರಪ್ಪ ೧೮೦ ಶ್ರೀ ಡಿ. ಚನ್ನಪ್ಪ ೩೩೧, ಶ್ರೀ ಜಿ. ರಾಜೂಗೌಡ ೪೬೮ ಶ್ರೀಮತಿ ಕೆ.ಎಸ್. ನಾಗರತ್ನಮ್ಮ ೩೬೯. ಶ್ರೀ ಜಿ.ವಿ. ಮಂಟೂರ್ ೫, ಶ್ರೀ ಗೋಪಾಲ ಮುಕುಂದ ಕಾನಡೆ ಈ ಪ್ರಶ್ನೆಗಳನ್ನು ಹೆಲ್ಡ್ ಓವರ್ ಮಾಡಲಾಗಿದೆ.